(ಸಾಕ್ಷಿಯನ್ನು ದಿನಾಂಕಃ 27.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. )

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರುಃ ಶ್ರೀ ಹೆಚ್ ಎಂ ರವರಿಂದ**

ಭೂಸ್ವಾಧೀನ ಪ್ರಕ್ರಿಯೆ ಆಗಿ ಪ್ರತಿವಾದಿಗಳು ಅಕ್ರಮವಾಗಿ 1950 ರಲ್ಲಿ ಬಂದು ಸೇರಿಕೊಂಡಾಗ, ತಿಮ್ಮಮ್ಮ ಬದುಕಿದ್ದರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಅವರ ಅಣ್ಣ ಒಡ್ಡರವರು ಬದುಕಿದ್ದರು. ತಿಮ್ಮಮ್ಮ ರವರು ಯಾವಾಗ ತೀರಿಕೊಂಡರೆಂದು ನನಗೆ ಗೊತ್ತಿಲ್ಲ. 1950 ನೇ ಇಸವಿಯಲ್ಲಿ ಪ್ರತಿವಾದಿಗಳು ಅಕ್ರಮವಾಗಿ ಸೇರಿಕೊಂಡ ನಂತರ ತಿಮ್ಮಮ್ಮರವರಾಗಲೀ ಮತ್ತು ಒಡ್ಡಾರವರಾಗಲೀ ಸದರೀ ಆಸ್ತಿಯಿಂದ

ಪ್ರತಿವಾದಿಗಳನ್ನು ಒಕ್ಕಲೆಬ್ಬಿಸಲು ಪ್ರಯತ್ನಿಸಿದರಾ ಎಂದರೆ ಭೂಸ್ವಾಧೀನವಾಗುತ್ತದೆಯೆಂದು ನಂಬಿಕೆಯಿಂದ ಮಾಡಿಲ್ಲ ಎಂದು ನುಡಿಯುತ್ತಾರೆ. ನಂತರ ಶಿವಮಾದಯ್ಯರವರಾಗಲೀ, ಮತ್ತು ಮರಿಗೌಡರವರಾಗಲೀ ಪ್ರತಿವಾದಿಗಳನ್ನು ದಾವಾ ಸ್ವತ್ತಿನಿಂದ ಒಕ್ಕಲೆಬ್ಬಿಸುವ ಪ್ರಯತ್ನ ಮಾಡಿದರಾ ಎಂದರೆ ಸಾಕ್ಷಿ ಮಾಡಿರುತ್ತಾರೆಂದು ನುಡಿಯುತ್ತಾರೆ. 1950 ನೇ ಇಸವಿಯಿಂದ 1975 ರ ತನಕ ಮಾಡಿರುತ್ತಾರೆ. ಅದನ್ನು ಮಾಡಿರುವ ಬಗ್ಗೆ ದಾಖಲೆಯಿದೆಯಾ ಎಂದರೆ ಸಾಕ್ಷಿ ಮೌಖಿಕವಾಗಿ ಹೇಳಿರುತ್ತಾರೆಂದು ನುಡಿಯುತ್ತಾರೆ. 1975 ನೇ ಇಸವಿಯಲ್ಲಿ ಜಿಲ್ಲಾಧಿಕಾರಿಗಳು ಡಿ ನೋಟಿಫಿಕೇಷನ್ ನ್ನು ಮಾಡಿದ ಕಾರಣ ಸದರೀ ಆರಿ ಟಿ ಸಿ ಗಳು ಭೂಮಾಲೀಕರ ಹೆಸರಿಲ್ಲಿ ಉಳಿದ ಕಾರಣ ಅವರು ತೀವ್ರತರವಾದ ಪ್ರತಿರೋಧವನ್ನು ಮಾಡಿರುವುದಿಲ್ಲ. ಡಿ ಸಿ ಯವರು ಡಿ ನೋಟಿಫಿಕೇಷನ್ ಮಾಡಿದ ನಂತರ ಪ್ರತಿವಾದಿಗಳನ್ನು ದಾವಾ ಸ್ವತ್ತಿನಿಂದ ತೆರವುಗೊಳಿಸುವ ಪ್ರಯತ್ನವನ್ನು ಜಿಲ್ಲಾಧಿಕಾರಿಗಳು ಮಾಡಿದರಾ ಎಂದರೆ ಸಾಕ್ಷಿ ಜಿಲ್ಲಾಧಿಕಾರಿಗಳೂ ಮಾಡಿಲ್ಲ ಮತ್ತು ಸರ್ಕಾರದವರೂ ಮಾಡಿಲ್ಲ ಎಂದು ನುಡಿಯುತ್ತಾರೆ. 2012 ನೇ ಇಸವಿಯ ಬದಲು ಈ ದಾವೆಯನ್ನು 1975 ನೇ ಇಸವಿಯಲ್ಲಿ ದಾಖಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಏನಾದರೂ ಒಂದು ಇತ್ಯರ್ಥವಾಗಬಹುದು ಎಂದು ಮತ್ತು ದಾವಾ ಸ್ವತ್ತು ನಮ್ಮ ಹೆಸರಿನಲ್ಲಿಯೇ ಇದ್ದ ಕಾರಣ ನಾವು ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಹೆಸರಿನಲ್ಲಿದ್ದ ದಾಖಲೆಗಳನ್ನು ಬದಲಾವಣೆ ಮಾಡಲು ಹೋದಾಗ ನಾವು ಈ ದಾವೆಯನ್ನು ಹೂಡಿರುತ್ತೇವೆಂದು ನುಡಿಯುತ್ತಾರೆ. ಸರ್ಕಾರ ದಾವಾ ಸ್ವತ್ತನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಪ್ರತಿವಾದಿಗಳು ಸದರೀ ಆಸ್ತಿಗಳಿಗೆ ಬಂದು ಸೇರಿಕೊಂಡಿರುತ್ತಾರೆ, ನಂತರ ಜಿಲ್ಲಾಧಿಕಾರಿಗಳು ಸದರೀ ಆಸ್ತಿಯನ್ನು ಡಿ ನೋಟಿಫೈ ಮಾಡಿರುತ್ತಾರೆ. ಆನಂತರ ಪ್ರತಿವಾದಿಗಳನ್ನು ತೆರವುಗೊಳಿಸಿ ಅದರ ಸ್ವಾಧೀನವನ್ನು ಕೊಡಿಸಿಕೊಡಿ ಎಂದು ನೀವು ಜಿಲ್ಲಾಧಿಕಾರಿಗಳನ್ನು ಕೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ನೀವು ಪ್ರತಿವಾದಿಗಳನ್ನು ಸ್ವಾಧೀನ ಬಿಟ್ಟುಕೊಡುವಂತೆ ಕೇಳಲು ಆಗುವುದಿಲ್ಲ, ನೀವು ಸರ್ಕಾರವನ್ನು ಕೇಳಬೇಕೆಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನ ಹಕ್ಕುದಾರರಲ್ಲ ಮತ್ತು ಅದರ ಸ್ವಾಧೀನವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ನೀವು ವಾದಿಯವರನ್ನು ಎತ್ತಿಕಟ್ಟಿ ಈ ಸುಳ್ಳು ದಾವೆಯನ್ನು ಹೂಡಿ, ಪ್ರತಿವಾದಿಗಳಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ                                                  ಮತ್ತು ಜೆ ಎಂ ಎಫ್ ಸಿ ಮದ್ದೂರು.